# ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

ಸಂ:ಕವಿಹಂ:ಅನಿ:ಸ್ನಾ.ಪ.ಪ.ಪ್ರ:೨೦೨೨-೨೩ ದಿನಾಂಕ: ೧೫.೧೨.೨೦೨೨

## ಪ್ರವೇಶ ಪ್ರಕಟಣೆ

## ಸ್ನಾತಕೋತ್ತರ ಕಾರ್ಯಕ್ರಮಗಳ ಅಧ್ಯಯನಕ್ಕೆ ಅರ್ಜಿ ಆಹ್ವಾನ

ಕನ್ನಡ ವಿಶ್ವವಿದ್ಯಾಲಯವು ೨೦೨೨-೨೩ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಈ ಕೆಳಕಂಡ ಸ್ನಾತಕೋತ್ತರ ಕಾರ್ಯಕ್ರಮಗಳ ಪ್ರವೇಶಾತಿಗೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು **uucms** ಮೂಲಕ ಆಹ್ವಾನಿಸಿದೆ. ಅರ್ಹತಾ ವಿವರಗಳು ಈ ಕೆಳಕಂಡಂತಿವೆ.

| ಕ್ರ ಸಂ. | ಕಾರ್ಯಕ್ರಮ | ಪ್ರವೇಶಾರ್ಹತೆ | Intake | ಕೇಂದ್ರ/ಸಂಸ್ಥೆ |
|---|---|---|---|---|
| ೧ | ಎಂ.ಎ.ಪಿಎಚ್.ಡಿ (ಕನ್ನಡ ಸಾಹಿತ್ಯ) ಸಂಯೋಜಿತ | ಎಂ.ಎ.ಪಿಎಚ್.ಡಿ (ಕನ್ನಡ ಸಾಹಿತ್ಯ) ಸಂಯೋಜಿತ ಸ್ನಾತಕೋತ್ತರ ಪದವಿಗೆ (೨+೪) ಅರ್ಜಿ ಸಲ್ಲಿಸುವವರು ಯಾವುದೇ ಅಂಗೀಕೃತ ವಿಶ್ವವಿದ್ಯಾಲಯದಿಂದ ಮೂರು ವರ್ಷಗಳ ಕನ್ನಡವನ್ನು ಐಚ್ಛಿಕ ವಿಷಯದ ಪದವಿಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ ಯಾವುದೇ ಪದವಿಯಲ್ಲಿ ಕನ್ನಡವನ್ನು ಒಂದು ಭಾಷೆಯನ್ನಾಗಿ ಓದಿ ಆ ವಿಷಯದಲ್ಲಿ ಶೇ.೫೦ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರಬೇಕು. **ಸೂಚನೆ:** ಎಂ.ಎ.ಪಿಎಚ್.ಡಿ ವಿದ್ಯಾರ್ಥಿಗಳು ೪ನೇ ಸೆಮಿಸ್ಟರ್ ಉತ್ತೀರ್ಣರಾದ ಮೇಲೆ ೫ನೇ ಸೆಮಿಸ್ಟರ್ ಪಿಎಚ್.ಡಿ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಪಿಎಚ್.ಡಿ ರಿಕ್ತಸ್ಥಾನಗಳಿಗೆ ಅನುಗುಣವಾಗಿ ಮೀಸಲಾತಿಗಳನ್ವಯ ಮಾತ್ರ ಪಿಎಚ್.ಡಿ ಪ್ರವೇಶಕ್ಕೆ ಅವಕಾಶವಿರುತ್ತದೆ. | ೨೦ | ವಿದ್ಯಾರಣ್ಯ |
| ೨ | ಎಂ.ಎ. (ಕನ್ನಡ ಸಾಹಿತ್ಯ) | ಎಂ.ಎ. (ಕನ್ನಡ) ಸ್ನಾತಕೋತ್ತರ ಪದವಿಗೆ ಅರ್ಜಿ ಸಲ್ಲಿಸುವವರು ಅಂಗೀಕೃತ ವಿಶ್ವವಿದ್ಯಾಲಯದಿಂದ ಮೂರು ವರ್ಷಗಳ ಕನ್ನಡವನ್ನು ಐಚ್ಛಿಕ ವಿಷಯದ ಪದವಿಯಲ್ಲಿ ಉತ್ತೀರ್ಣರಾಗಿರಬೇಕು. ಅಥವಾ ಯಾವುದೇ ಪದವಿಯಲ್ಲಿ ಕನ್ನಡವನ್ನು ಒಂದು ಭಾಷೆಯನ್ನಾಗಿ ಓದಿ ಆ ವಿಷಯದಲ್ಲಿ ಶೇ.೫೦ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರಬೇಕು. | ೨೦ | ಬೆಳಗಾವಿ |
| | | | ೨೦ | ದೇವದುರ್ಗ |
| ೩ | ಎಂ.ಎ. (ಮಹಿಳಾ ಅಧ್ಯಯನ) | ಎಂ.ಎ. (ಮಹಿಳಾ ಅಧ್ಯಯನ) ಸ್ನಾತಕೋತ್ತರ ಪದವಿಗೆ ಅರ್ಜಿ ಸಲ್ಲಿಸುವವರು ಅಂಗೀಕೃತ ವಿಶ್ವವಿದ್ಯಾಲಯದಿಂದ ಮೂರು ವರ್ಷಗಳ ಯಾವುದೇ ಪದವಿಯಲ್ಲಿ ಉತ್ತೀರ್ಣರಾಗಿರಬೇಕು. | ೨೦ | ವಿದ್ಯಾರಣ್ಯ |
| ೪ | ಎಂ.ಎ. (ಗ್ರಾಮೀಣಾಭಿವೃದ್ಧಿ) | ಎಂ.ಎ. (ಗ್ರಾಮೀಣಾಭಿವೃದ್ಧಿ) ಸ್ನಾತಕೋತ್ತರ ಪದವಿಗೆ ಅರ್ಜಿ ಸಲ್ಲಿಸುವವರು ಅಂಗೀಕೃತ ವಿಶ್ವವಿದ್ಯಾಲಯದಿಂದ ಮೂರು ವರ್ಷಗಳ ಯಾವುದೇ ಪದವಿಯಲ್ಲಿ ಉತ್ತೀರ್ಣರಾಗಿರಬೇಕು. | ೨೦ | ದೇವದುರ್ಗ |
| ೫ | ಎಂ.ಎ. (ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ) | ಎಂ.ಎ. (ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ) ಸ್ನಾತಕೋತ್ತರ ಪದವಿಗೆ ಅರ್ಜಿ ಸಲ್ಲಿಸುವವರು ಅಂಗೀಕೃತ ವಿಶ್ವವಿದ್ಯಾಲಯದಿಂದ ಮೂರು ವರ್ಷಗಳ ಯಾವುದೇ ಪದವಿಯಲ್ಲಿ ಉತ್ತೀರ್ಣರಾಗಿರಬೇಕು. | ೪೦ | ವಿದ್ಯಾರಣ್ಯ |
| ೬ | ಎಂ.ಮ್ಯೂಜಿಕ್ (ಹಿಂದೂಸ್ತಾನಿ ಗಾಯನ) | ಅಂಗೀಕೃತ ವಿಶ್ವವಿದ್ಯಾಲಯದಿಂದ ಬಿ.ಮ್ಯೂಜಿಕ್ ಅಥವಾ ಬಿ.ಎ.ಮ್ಯೂಜಿಕ್ ಮೂರು ವರ್ಷಗಳ ಪದವಿಯಲ್ಲಿ ಉತ್ತೀರ್ಣರಾಗಿರಬೇಕು. ಅಥವಾ ಅಂಗೀಕೃತ ವಿಶ್ವವಿದ್ಯಾಲಯದ ಮೂರು ವರ್ಷಗಳ ಯಾವುದೇ ಪದವಿಯೊಂದಿಗೆ ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯ ನಡೆಸುವ ಸೀನಿಯರ್‌ಗ್ರೇಡ್ (ಗಾಯನ) ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. | ೨೦ | ವಿದ್ಯಾರಣ್ಯ |
| | | | ೨೦ | ಹಂಸಲೇಖ ದೇಸಿ ವಿದ್ಯಾಸಂಸ್ಥೆ, ಬೆಂಗಳೂರು |

| | | | | |
|---|---|---|---|---|
| ೭ | ಎಂ.ಮ್ಯೂಜಿಕ್ (ಕರ್ನಾಟಿಕ್ ಸಂಗೀತ) | ೧. ವಿದ್ಯಾರ್ಥಿಗಳು ೫೦ ಪ್ರತಿಶತದೊಂದಿಗೆ ಯಾವುದೇ ವಿಶ್ವವಿದ್ಯಾಲಯದಿಂದ ಪದವಿ ಪೂರ್ಣಗೊಳಿಸಿರಬೇಕು.<br>೨. ವಿದ್ಯಾರ್ಥಿಗಳು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಅಥವಾ ಇತರೆ ರಾಜ್ಯಗಳಲ್ಲಿ ಯಾವುದೇ ತತ್ಸಮಾನ ಪರೀಕ್ಷೆ ನಡೆಸುವ ಹಿರಿಯ ದರ್ಜೆ ಪರೀಕ್ಷೆಯಲ್ಲಿ ಪೂರ್ಣಗೊಳಿಸಿರಬೇಕು. | ೨೦ | ರಸಋಷಿ ಸಂಶೋಧನಾ ಕೇಂದ್ರ, ಚನ್ನಪಟ್ಟಣ ತಾಲೂಕು, ರಾಮನಗರ ಜಿಲ್ಲೆ |
| ೮ | ಎಂ.ನೃತ್ಯ (ಭರತನಾಟ್ಯ) | ೧. ವಿದ್ಯಾರ್ಥಿಗಳು ೫೦ ಪ್ರತಿಶತದೊಂದಿಗೆ ಯಾವುದೇ ವಿಶ್ವವಿದ್ಯಾಲಯದಿಂದ ಪದವಿ ಪೂರ್ಣಗೊಳಿಸಿರಬೇಕು.<br>೨. ವಿದ್ಯಾರ್ಥಿಗಳು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಅಥವಾ ಇತರೆ ರಾಜ್ಯಗಳಲ್ಲಿ ಯಾವುದೇ ತತ್ಸಮಾನ ಪರೀಕ್ಷೆ ನಡೆಸುವ ಹಿರಿಯ ದರ್ಜೆ ಪರೀಕ್ಷೆಯಲ್ಲಿ ಪೂರ್ಣಗೊಳಿಸಿರಬೇಕು. | ೨೦ | ರಸಋಷಿ ಸಂಶೋಧನಾ ಕೇಂದ್ರ, ಚನ್ನಪಟ್ಟಣ ತಾಲೂಕು, ರಾಮನಗರ ಜಿಲ್ಲೆ |
| ೯ | ಎಂ.ವಿ.ಎ. (ಚಿತ್ರಕಲೆ) | ಎಂ.ವಿ.ಎ. (ಚಿತ್ರಕಲೆ) ಸ್ನಾತಕೋತ್ತರ ಪದವಿಗೆ ಅರ್ಜಿ ಸಲ್ಲಿಸುವವರು ಅಂಗೀಕೃತ ವಿಶ್ವವಿದ್ಯಾಲಯದಿಂದ **ಬಿ.ಎಫ್.ಎ/ಬಿ.ವಿ.ಎ./ಬಿ.ಎ. ಫೈನ್ ಆರ್ಟ್** ಮೂರು ವರ್ಷಗಳ ಪದವಿ ಅಥವಾ ತತ್ಸಮಾನ ಪದವಿಯಲ್ಲಿ ಉತ್ತೀರ್ಣರಾಗಿರಬೇಕು. | ೨೦ | ವಿದ್ಯಾರಣ್ಯ |
| ೧೦ | ಎಂ.ಎಸ್.ಸಿ. ಯೋಗ | ಎಂ.ಎಸ್.ಸಿ (ಯೋಗ) ಸ್ನಾತಕೋತ್ತರ ಪದವಿಗೆ ಅರ್ಜಿ ಸಲ್ಲಿಸುವವರು ಅಂಗೀಕೃತ ವಿಶ್ವವಿದ್ಯಾಲಯದಿಂದ ಮೂರು ವರ್ಷಗಳ ಯಾವುದೇ ಪದವಿಯಲ್ಲಿ ಉತ್ತೀರ್ಣರಾಗಿರಬೇಕು. | ೨೦ | ವಿದ್ಯಾರಣ್ಯ |

**ಈ ಮೇಲಿನ ಕಾರ್ಯಕ್ರಮಗಳಿಗೆ ಅರ್ಜಿ ಸಲ್ಲಿಸುವ ಎಲ್ಲ ಅಭ್ಯರ್ಥಿಗಳು ಕನ್ನಡ ವಿಶ್ವವಿದ್ಯಾಲಯದ ಕ್ಯಾಂಪಸ್ ಕಾಲೇಜಿಗೆ ಎಂದು ಆಯ್ಕೆ ಮಾಡಿ ಪ್ರವೇಶಕ್ಕೆ ಅರ್ಜಿ ಸಲ್ಲಿಸತಕ್ಕದ್ದು. ವಿದ್ಯಾರಣ್ಯ ಮತ್ತು ಬೆಂಗಳೂರು ಕೇಂದ್ರಗಳಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದನ್ನು ವಿಶ್ವವಿದ್ಯಾಲಯವೇ ಅಂತಿಮಗೊಳಿಸುತ್ತದೆ.**

**೧. ಪ್ರವೇಶಾತಿಯ ಆರಂಭ ದಿನಾಂಕ: ೧೬.೧೨.೨೦೨೨ ಮತ್ತು ಕೊನೆಯ ದಿನಾಂಕ: ೩೧.೧೨.೨೦೨೨ ಆಗಿರುತ್ತದೆ.**

**೨. ದಂಡ ಶುಲ್ಕ ರೂ : ೨೦೦/- ಗಳೊಂದಿಗೆ ಕೊನೆಯ ದಿನಾಂಕ: ೦೭.೦೧.೨೦೨೩**

**ವಿದ್ಯಾರ್ಥಿಗಳು ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು https://uucms.karnataka.gov.in/ ಗೆ ಹೋಗಿ Register ಮಾಡಿಕೊಂಡು uucms ಮೂಲಕ ಅರ್ಜಿಗಳನ್ನು ಸಲ್ಲಿಸುವುದು. ಅಥವಾ ಕನ್ನಡ ವಿಶ್ವವಿದ್ಯಾಲಯದ ವೆಬ್‌ಸೈಟ್ www.kannadauniversity.org ಗೆ ಹೋಗಿ ಅಲ್ಲಿಂದ uucms ಮೂಲಕ ಸಲ್ಲಿಸುವುದು.**

ನಿರ್ದೇಶಕರು, ಅಧ್ಯಯನಾಂಗ